**ಓ .ಎಸ್ . ನಂ. 207/2014** **ಪಿಡಬ್ಲ್ಯೂ: 2**

**ದಿನಾಂಕ 09.04.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಎನ್.ಆರ್.ಕೆ. 10ನೇ ಪ್ರತಿವಾದಿರವರ ವಾರಸುದಾರರ ಪರ ವಕೀಲರಿಂದಃ**

ನಾನು ಹೊಂಡರಬಾಳು ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು 1990ನೇ ಸಾಲಿನವರೆಗೂ ಮಾಂಬಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆನು. ನನಗೆ ರಾಮಬೋವಿ ಎನ್ನುವವರು ನನಗೆ ಗೊತ್ತಿಲ್ಲ. ರಾಮಬೋವಿ ಎನ್ನುವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಹನುಮಂತ ಬೋವಿ ಎನ್ನುವವರು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ರಾಜಮ್ಮನವರು 3ನೇ ಪ್ರತಿವಾದಿಯಾಗಿರುತ್ತಾರೆ. ಈ ದಾವೆಯನ್ನು ರಾಜಮ್ಮನವರು ಗೋವಿಂದರಾಜುರವರ ವಿರುದ್ಧ ಸಲ್ಲಿಸಿರುತ್ತಾರೆ. ಈ ದಾವೆಯನ್ನು 4 ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ರಾಮಬೋವಿರವರಿಗೆ ಯಾವೆಲ್ಲಾ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ಗಳು 128/1 ಮತ್ತು 128/2 ಆಗಿರುತ್ತದೆ. ಸರ್ವೆ ನಂಬರ್ 128/1 ರಲ್ಲಿ 1 ಎಕರೆ 74 ಸೆಂಟ್ ಇರುತ್ತದೆ, ಸರ್ವೆ ನಂಬರ್ 128/2 ರಲ್ಲಿ 2 ಎಕರೆ ಆಸ್ತಿ ಇರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ನಾನು ಸುಮಾರು 5 ವರ್ಷದ ಮುಂಚೆ ಸದರಿ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಅವುಗಳು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಪುಟ್ಟಯ್ಯ ಎಂಬುವವರು ನನಗೆ ಗೊತ್ತಿಲ್ಲ. 1987 ರ ವಿಭಾಗದಲ್ಲಿ ನಾನು ಭಾಗವಹಿಸಿರುವುದಿಲ್ಲ. ಸದರಿ ವಿಭಾಗದ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳನ್ನು ನಾನು ವಾದಿಗೆ ಹೇಳಿರುತ್ತೇನೆ.

ಹನುಮಂತ ಬೋವಿರವರಿಗೆ 4 ಜನ ಮಕ್ಕಳಿರುತ್ತಾರೆ, ಸದರಿಯವರುಗಳು ತಿಮ್ಮಬೋವಿ, ಹನುಮಂತ ಬೋವಿ, ನಾಗರಾಜು ಬೋವಿ ಮತ್ತು ರಾಜಮ್ಮ ಆಗಿರುತ್ತಾರೆ. ಗೋವಿಂದರಾಜುರವರು ಕ್ರಯಪತ್ರವನ್ನು ನಕಲಿ ಮಾಡಿರುತ್ತಾರೆ. ಸದರಿ ನಕಲಿ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ನನಗೆ ಯಾವುದೇ ಸಂಗತಿಗಳು ತಿಳಿಯದೇ ಇದ್ದರೂ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ